**<u>ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಸೇಡಂ</u>**

**ಫೌಜದಾರಿ ಪ್ರಕರಣ ಸಂಖ್ಯೆಃ 1533/2022**

**ಸರಕಾರದ ಪರವಾಗಿ ಃ ಪೋಲೀಸ್ ಠಾಣೆ ಮಳಖೇಡ**

//ವಿರುದ್ಧ//

**ಆರೋಪಿ :** 1 ಅಮೃತಪ್ಪ ತಂದೆ ಶಿವರಾಯ ಪುಜಾರಿ
ವಃ 60 ವರ್ಷ, ಉಃ ಒಕ್ಕಲುತನ

2. ವಿಶ್ವರಾಧ್ಯ @ ವಿಶ್ವನಾಥ ತಂದೆ ಅಮೃತಪ್ಪ ಪುಜಾರಿ
ವಃ 21 ವರ್ಷ, ಉಃ ಒಕ್ಕಲುತನ ,
ಇಬ್ಬರೂ ಸಾಃ ಹಂಗನಳ್ಳಿ ಗ್ರಾಮ

**ದಂಡ ಪ್ರಕ್ರಿಯಾ ಸಂಹಿತೆ ಕಲಂ 313ರ ಅನ್ವಯ ಆರೋಪಿಯ ಹೇಳಿಕೆ**

ಪ್ರಶ್ನೆ 1) ಅಭಿಯೋಜನೆ ಪರ ವಿಚಾರಣೆ ಮಾಡಿದ ಸಾಕ್ಷಿಗಳನ್ನು ಮನಪೂರ್ವಕವಾಗಿ ಕೇಳಿದ್ದಿರಾ ?
ಉಃ ಕೇಳಿರುತ್ತೇನೆ.

ಪ್ರಶ್ನೆ 2) ಚಾಸಾ.1/ಪ್ರಾಸಾ.1 ಮಲ್ಲಪ್ಪ ತಂದೆ ಶಿವರಾಯ ಪೂಜಾರಿ, ತಮ್ಮ ಸಾಕ್ಷ್ಯದಲ್ಲಿ ದಿನಾಂಕ 30.07.2025 ರಂದು, ಚಾ ಸಾ 4 ಅವರ ಮಗ, ಚಾ ಸಾ 5 ಮತ್ತು 6 ರವರು ಅವರ ಊರಿನವರು, 1 ನೇ ಆರೋಪಿ ಅವರ ಅಣ್ಣ, 2 ನೇ ಆರೋಪಿ ಅವರ ಅಣ್ಣನ ಮಗ, ಸುಮಾರು 3 ವರ್ಷಗಳ ಹಿಂದೆ ಅವರ ಮತ್ತು ಆರೋಪಿತರ ನಡುವೆ ಜಗಳ ಆಗಿತ್ತು, ಹೊಲಗಳಲ್ಲಿ ಎತ್ತು ತಿರುಗಿ ಹೋಗಬಾರದು ಅಂತಾ ಜಗಳ ಆಗಿತ್ತು, ಇವರು ಘಟನೆ ನಡೆದ ದಿನ ತಮ್ಮ ಹೊಲಕ್ಕೆ ಹೋಗುವಾಗ ಆರೋಪಿತನು ತಮ್ಮ ಹೊಲಕ್ಕೆಹೋಗಲು ದಾರಿ ಬಿಡುವುದಿಲ್ಲ ಅಂತಾ ಹೇಳಿದಕ್ಕೆ ಇವರು ಮರಳಿ ಮನೆಗೆ ಬಂದಿದ್ದರು, ಸಾಕ್ಷಿಯು ದೂರು ದಾಖಲಾತಿ ನೋಡಿ ಗುರುತಿಸಿರುತ್ತಾರೆಂದು, ನುಡಿಯುತ್ತಾರೆ, ಅದಕ್ಕೆ ನೀನೇನು ಹೇಳುತ್ತೀ?
ಉಃ ಸುಳ್ಳು.

ಪ್ರಶ್ನೆ 3) ಚಾಸಾ.4/ಪ್ರಾಸಾ.2 ಜಗಣ್ಣ ತಂದೆ ಮಲ್ಲಪ್ಪ ಪೂಜಾರಿ, ತಮ್ಮ ಸಾಕ್ಷ್ಯದಲ್ಲಿ ದಿನಾಂಕ 30.07.2025 ರಂದು, ಚಾ ಸಾ 1 ಅವರ ತಂದೆ, ಚಾ ಸಾ 5 ಮತ್ತು 6 ರವರು ಅವರ ಊರಿನವರು, 1 ನೇ ಆರೋಪಿ ಅವರ ದೊಡ್ಡಪ್ಪ , 2 ನೇ ಆರೋಪಿ ಅವರ ದೊಡ್ಡಪ್ಪನ ಮಗ, ದಿ. 21-07-2022 ರಂದು ಬೆಳಿಗ್ಗೆ 10-00 ಸುಮಾರಿಗೆ ಚಾ ಸಾ 1 ಮತ್ತು ಆರೋಪಿತರ ನಡುವೆ ಜಗಳ ಆಗಿತ್ತು, ಅವರ ತಂದೆಯಾದ ಚಾ ಸಾ 1 ರವರು ಜಾಕನಳ್ಳಿ ರವರಮನೆಯ ಹತ್ತಿರ ನಡೆದುಕೊಂಡು ಹೋಗುವಾಗ ಆರೋಪಿತರು ಕೂಡಿಕೊಂಡು ಚಾ ಸಾ 1 ರವರಿಗೆ ಹೊಡೆದಿರುತ್ತಾರೆ, ಚಾ ಸಾ 1 ರವರ ಅವರಿಗೆ ಮನೆಗೆ ಬಂದು ತಿಳಿಸಿರುವುದೇನೆಂದರೆ 2 ನೇ ಆರೋಪಿತನು ಅವರಿಗೆ ಹಿಡಿದುಕೊಂಡಿದ್ದು ಮತ್ತು 1 ನೆ ಆರೋಪಿತನು ಕಟ್ಟಿಗೆಯಿಂದ ಕಾಲಿಗೆ, ಬೆನ್ನಿಗೆ ಮತ್ತು ಎದೆಗೆ ಹೊಡೆದಿದ್ದಾರೆ ಎಂದು ತಿಳಿಸಿದರು, ಆಗ ಚಾ ಸಾ 5ಮತ್ತು 6 ರವರು ಬಂದು ಜಗಳ ಬಿಡಿಸಿರುತ್ತಾರೆ ಎಂದು

ತಿಳಿಸಿದರು, ಆಗ ಇವರು ಪೊಲೀಸ್ ಠಾಣೆಗೆ ಹೋಗಿ ದೂರನ್ನು ಸಲ್ಲಿಸಿದ್ದರು, ಈ ಬಗ್ಗೆ ಇವರು ಪೊಲೀಸರಿಗೆ ಹೇಳಿಕೆಯನ್ನು ನೀಡಿರುತ್ತಾರೆ ಎಂದು ಹೇಳುತ್ತಾರೆ, ಅದಕ್ಕೆ ನೀನೇನು ಹೇಳುತ್ತೀ?
ಉಃ ಸುಳ್ಳು.

ಪ್ರಶ್ನೆ 4) ಚಾಸಾ.8/ಪ್ರಾಸಾ.5 ಮುಜಾಫರ್ ಅಲಿ ತಂದೆ ಸಯ್ಯದ್ ಜಾಫರ್ ಅಲಿ, ತಮ್ಮ ಸಾಕ್ಷ್ಯದಲ್ಲಿ ದಿನಾಂಕ 26.05.2026 ರಂದು, ಇವರು ದಿ. 21.07.2022 ರಂದು ಮಧ್ಯಾಹ್ನ 12.30 ಗಂಟೆಗೆ ಇವರು ಠಾಣಾ ಪ್ರಭಾರದಲ್ಲಿದ್ದಾಗ ಚಾಸಾ.1 ರವರು ಠಾಣೆಗೆ ಹಾಜರಾಗಿ ಒಂದು ಲಿಖಿತ ದೂರನ್ನು ಸಲ್ಲಿಸಿದರು, ಸದರಿ ದೂರಿನ ಅಧಾರದ ಮೇಲೆ ತಮ್ಮ ಠಾಣೆಯ ಗುನ್ನೆ ನಂ. 42/2022 ನ್ನು ದಾಖಲಿಸಿಕೊಂಡು ಪ್ರ ವ ವರದಿಯನ್ನು ಮಾನ್ಯ ನ್ಯಾಯಲಯಕ್ಕೆ ಮತು ಮೆಲಾಧಿಕಾರಿಗಳಿಗೆ ಕಳುಹಿಸಿಕೊಟ್ಟರು, ನಂತರ ಅದೇ ದಿನ ಮಧ್ಯಾಹ್ನ 02.30 ರಿಂದ 3.30 ಗಂಟೆಯ ವರೆಗೆ ಚಾಸಾ.2 ಮತ್ತು 3 ರವರ ಸಮಕ್ಷಮ ಪಂಚನಾಮೆಯನ್ನು ಜರುಗಿಸಿ ಪಂಚನಾಮೆಯ ಕಾಲಕ್ಕೆ ಒಂದು ಬಡಿಗೆಯನ್ನು ವಶ ಪಡಿಸಿಕೊಂಡಿರುತ್ತಾರೆ, ಸಾಕ್ಷಿಯು ಸದರಿ ಪಂಚನಾಮೆ, ಬಡಿಗೆಯನ್ನು ನೋಡಿ ಗುರುತಿಸಿರುತ್ತಾರೆ, ನಂತರ ಅದೇ ದಿನ ಚಾಸಾ.4 ರಿಂದ 6 ರವರ ಹೇಳಿಕೆಯನ್ನು ದಾಖಲಿಸಿರುತ್ತಾರೆ, ನಂತರ ದಿ. 24.07.2022 ರಂದು ಚಾಸಾ.7 ರವರಿಂದ ಚಾಸಾ.1 ರವರ ಗಾಯದ ಪ್ರಮಾಣ ಪತ್ರವನ್ನು ಸ್ವೀಕರಿಸಿರುತ್ತಾರೆ, ಸದರಿ ಪ್ರಮಾಣ ಪತ್ರವನ್ನು ನೋಡಿ ಗುರುತಿಸಿರುತ್ತಾರೆ, ನಂತರ ಕಡತವನ್ನು ಪರಿಶೀಲಿಸಿ ಸಾಕಷ್ಟು ಸಾಕ್ಷಾಧಾರ ಇರುವುದರಿಂದ ಆರೋಪಿತರ ವಿರುದ್ಧ ಅಂತಿಮ ದೋಷಾರೋಪಣ ಪಟ್ಟಿ ಸಲ್ಲಿಸಿರುತ್ತಾರೆ, ಎಂದು ಹೇಳುತ್ತಾರೆ, ಅದಕ್ಕೆ ನೀನೇನು ಹೇಳುತ್ತೀ?
ಉಃ ಸುಳ್ಳು.

ಪ್ರಶ್ನೆ 5) ನೀನು ಇನ್ನೇನಾದರೂ ಹೆಚ್ಚಿಗೆ ಹೇಳುವುದು ಇದೆಯೇ ?
ಉಃ

ಪ್ರಶ್ನೆ 6) ನಿನ್ನ ಪರವಾಗಿ ಯಾವುದಾದರೂ ಸಾಕ್ಷಿಗಳನ್ನು ಮಾಡಿಸುತ್ತೀಯಾ?
ಉಃ

(ಆರೋಪಿಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿ, ಆರೋಪಿತನ ಹೇಳಿಕೆಯನ್ನು ದಾಖಲಿಸಿಕೊಂಡು ಆತನಿಗೆ ಗೊತ್ತಿದ್ದ ಭಾಷೆಯಲ್ಲಿ ಅಭಿಯೋಜಕರ ಪರ ವಿಚಾರಣೆಯಾದ ಸಾಕ್ಷಿಗಳ ಹೇಳಿಕೆಗಳನ್ನು ಓದಿ ಹೇಳಿ ಆತನ ಹೇಳಿಕೆಯನ್ನು ಪಡೆಯಲಾಯಿತು).

ಸಹಿ/-

ದಿನಾಂಕ ಃ 10-06-2026 ಪ್ರ.ದ. ನ್ಯಾ.ದಂ. ಸೇಡಂ.